# ಕರ್ನಾಟಕ ಸರ್ಕಾರದ ನಡವಳಿಗಳು

ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
ಸಂ. 804
ದಿನಾಂಕ 23/4/21
ಬೆಂಗಳೂರು

**ವಿಷಯ :** M/s Gamesa Renewable Private Limited ಕಂಪನಿಯವರಿಗೆ ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ ಕೂಡ್ಲಗಿ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ರವರಿಗೆ ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 67.2 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಇಎನ್ 100 ಎನ್‌ಸಿಇ 2016, ದಿನಾಂಕ:22.07.2016
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರ ಪತ್ರ ಸಂಖ್ಯೆ:KREDL/08/OKPPL-67.2 MW (GRPL-20MW)/Kudligi & Jagalur/F-14(2021)/1332, ದಿನಾಂಕ: 26.03.2021

26/4/21

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದನ್ವಯ M/s Gamesa Renewable Private Limited ರವರಿಗೆ ಬಳ್ಳಾರಿ ಜಿಲ್ಲೆಯ, ಸಂಡೂರು ಮತ್ತು ಕೂಡ್ಲಿಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 14 ಮೆ.ವ್ಯಾ ಮತ್ತು ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ, ಕೂಡ್ಲಿಗಿ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 20 ಮೆ.ವ್ಯಾ ಸಾಮರ್ಥ್ಯದ ಯೋಜನೆ ಸೇರಿ ಒಟ್ಟು 34 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಕೆಲವು ಷರತ್ತುಗಳಿಗೊಳಪಟ್ಟು ಹಂಚಿಕೆ ಮಾಡಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್.ರವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಮೇಲಿನ ಆದೇಶದನ್ವಯ M/s Gamesa Renewable Private Limited ಕಂಪನಿಗೆ ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ, ಕೂಡ್ಲಿಗಿ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು 67.2 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವಂತೆ M/s Ostro Kannada Power Private Limited ಇವರು ಕೆ.ಆರ್.ಇ.ಡಿ.ಎಲ್.ನ್ನು ಕೋರಿರುವುದಾಗಿ, ಸದರಿ ವರ್ಗಾವಣೆಗೆ ಎರಡು ಕಂಪನಿಯವರು ಸಹಮತಿ ನೀಡಿರುವುದಾಗಿ ಹಾಗೂ ಸದರಿ ವರ್ಗಾವಣೆ ಪ್ರಸ್ತಾವನೆಗೆ ಅನ್ವಯವಾಗುವ ನಿಗದಿತ ಶುಲ್ಕಗಳನ್ನು ಪಾವತಿಸಿಕೊಂಡಿರುವುದಾಗಿ ಕ್ರೆಡಲ್ ರವರು ತಿಳಿಸಿರುತ್ತಾರೆ.

ಮುಂದುವರೆದು, ಸದರಿಯವರು ಯೋಜನೆಯನ್ನು ಅನುಷ್ಠಾನಗೊಳಿಸಲು ಅಕ್ಷಾಂಶ ಮತ್ತು ರೇಖಾಂಶ ಸ್ಥಳದಲ್ಲಿ 32 ಸಂಖ್ಯೆಯ ವಿಂಡ್ ಟರ್ಬೈನ್‌ಗಳನ್ನು (2100 ಕಿ.ವ್ಯಾ. ಸಾಮರ್ಥ್ಯದ ಟರ್ಬೈನ್‌ಗಳು) ಅಳವಡಿಸಲು ಪ್ರತಿ ಟರ್ಬೈನ್‌ನ footprint ಜಾಗಕ್ಕೆ 4 ಎಕರೆಯಂತೆ ಒಟ್ಟು 128 ಎಕರೆ ಜಮೀನನ್ನು ಉಪಯೋಗಿಸಿಕೊಳ್ಳುವುದಾಗಿ ತಿಳಿಸುತ್ತಾ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತಿಗೆ ಸಂಬಂಧಿಸಿದಂತೆ ಮೂಲ ಆದೇಶದಲ್ಲಿ ನಮೂದಿಸಿರುವ ಸ್ವಂತ ಬಳಕೆ / ಮೂರನೇ ವ್ಯಕ್ತಿಗೆ ರಾಜ್ಯ ವಿದ್ಯುತ್ ಪ್ರಸರಣ ಜಾಲದ ಮುಖಾಂತರ ಮಾರಾಟ ಮಾಡುವ ಬದಲಾಗಿ, ಕೇಂದ್ರ ಸರ್ಕಾರದ Power Grid Corporation Of India Limited (PGCIL) ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ಮೂರನೇ ವ್ಯಕ್ತಿಗೆ Inter State Transmission System (ISTS) ವರ್ಗದ ಮುಖಾಂತರ ವಿದ್ಯುತ್ ಸರಬರಾಜು ಮಾಡುವ ಹಾಗೂ M/s Gamesa Renewable Private Limited ಕಂಪನಿಗೆ ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ, ಕೂಡ್ಲಿಗಿ ಮತ್ತು ಜಗಳೂರು ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ವರ್ಗಾವಣೆ ಮಾಡಿ, ಸದರಿ ಸಾಮರ್ಥ್ಯವನ್ನು 67.2 ಮೆ.ವ್ಯಾ ಸಾಮರ್ಥ್ಯಕ್ಕೆ ಹೆಚ್ಚಿಸುವ ಸಂಬಂಧ ಸದರಿ ಯೋಜನೆಯ ಚೆಕ್‌ಲಿಸ್ಟ್‌ನೊಂದಿಗೆ ಶಿಫಾರಸ್ಸು ಮಾಡಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

Wind Section
Inward No. 1010
Date 2/6/21

...2

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಎನರ್ಜಿ 103 ಎನ್ ಸಿಇ 2021**
**ಬೆಂಗಳೂರು ದಿನಾಂಕ:19.04.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s Gamesa Renewable Private Limited ಕಂಪನಿಯವರಿಗೆ ಬಳ್ಳಾರಿ ಮತ್ತು ದಾವಣಗೆರೆ ಜಿಲ್ಲೆಗಳ, ಕೂಡ್ಲಿಗಿ ಮತ್ತು ಜಗಳೂರು ತಾಲ್ಲೂಕುಗಳ ಹೊಸಹಳ್ಳಿ ಆರ್‌ಎಫ್, ಕೊಲಮಟ್ಟಿ, ಹೊಸಹಳ್ಳಿ, ಹುಲಿಕೆರೆ, ಸಕಲಾಪುರ್, ಯೆಂಬಲಿ, ವಡ್ಡರಹಟ್ಟಿ, ಮಾಲೂರು, ಆಲೂರ್, ಕೆಂಚಮ್ಮನಹಳ್ಳಿ, ಗೊಲ್ಲರಹಟ್ಟಿ, ಹುಚ್ಚವ್ವನಹಳ್ಳಿ, ಕೋರಸಾರಹಟ್ಟಿ, ದಿಬ್ಬದಹಳ್ಳಿ, ತಾಯಿತೊನೆ, ಹಿರೆಮಲ್ಲನಹೊಳೆ, ಕಾಮುಂದನವಂಡಿ ಮತ್ತು ಸಾಲಹಳ್ಳಿ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 20 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು M/s Ostro Kannada Power Private Limited ಕಂಪನಿಯವರಿಗೆ ಈ ಕೆಳಕಂಡ ಶೆಡ್ಯೂಲ್ ಹಾಗೂ ಷರತ್ತಿಗೊಳಪಟ್ಟು ವರ್ಗಾಯಿಸಿ, ಸದರಿ ಸಾಮರ್ಥ್ಯವನ್ನು 67.2 ಮೆ.ವ್ಯಾಗೆ ಹೆಚ್ಚಿಸಿ ಆದೇಶಿಸಿದೆ.

**Geographical area description for 67.2 MW capacity wind power project of M/s Ostro Kannada Power Private Limited**

| Sl No | Geographical area description of the project | Near by villages of the proposed area & District | Existing (Transfer) capacity in MW | Capacity on enhancement in MW | Total capacity in MW |
|---|---|---|---|---|---|
| 1 | The Proposed area is almost plain covered with eucalyptus plantation and is comes under Hosahalli Reserved Forest. The identified area is surrounded by points A,B,C,D,E and are held in the following Geographical co-ordinates as:<br><br>**Point A**:Lat:14°30'0"N, Long:76°25'49.08"E<br>**Point B**:Lat:14°36'25.92"N, Long:76°28'13.08"E<br>**Point C**:Lat:14°40'19.23"N,Long:76°28'31.58"E<br>**Point D:**Lat:14°40'31.08"N,Long:76°30'0"E<br>**Point E**:Lat:14°30'0"N,Long:76°30'0"E<br><br>Peaks:645, 669, 668, 650, 652, 635, 642, 649, 629, 638, & 626m AMSL<br><br>Toposheet No:57 B/6 | Hosahalli RF, Kolamatti, Hosahalli, Hulikere, Sakalapur, Yembuli, Vaddarahatti, Malur, Alur, Kenchammanahalli, Gollarahatti, Uchchavvanahalli, Korasarahatti, Dibbadahalli, Thayitone, Hire Mallanahole, Kamundanavandi and Salahalli villages of Kudligi & Jagluru Taluks, Davanagere & Bellary Districts | 20 MW | 47.2 MW | 67.2 MW (32 Nos x 2100 kW) |